**<u>ದಿನಾಂಕಃ 24-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ವಿ.ವಿ.ಎಸ್. 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ</u>**

1 ಮತ್ತು 2 ನೇ ಪ್ರತಿವಾದಿಯರು ಹಾಗೂ ಅವರ ಪರ ವಕೀಲರನ್ನು ಕೂಗಿಸಿ ಕರೆಯಲಾಯಿತು ಯಾರು ಹಾಜರಿರಲಿಲ್ಲ, ಹೀಗಾಗಿ ಅವರ ಪರ ಪಾಟೀ ಸವಾಲು ಇಲ್ಲಾ ಅಂತಾ ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲು ಶ್ರೀ ಸಿ.ಹೆಚ್.ಜಿ 3 ನೇ ಪ್ರತಿವಾದಿ ಪರ ವಕೀಲರಿಂದಃ</u>**

**1.** ಸದರಿ ದಾವೆಯನ್ನು ನಾನು ಮಾಡಿರುತ್ತೇನೆ. ಸದರಿ ದಾವೆಯನ್ನು ನನ್ನ ವೈಯಕ್ತಿಕ ನಾತೆಯಿಂದ ಮಾಡಿರುತ್ತೇನೆ. ಮೊಮ್ಮಕ್ಕಳು 18 ವರ್ಷದ ಒಳಗೆ ಇರುತ್ತಾರೆ. ಸದರಿ ದಾವೆಯನ್ನು ಅಳಿಯನ ವಿರುದ್ಧ ಮಾಡಿರುತ್ತೇನೆ. ನಾನು ಆತನ ಒಬ್ಬನ ವಿರುದ್ಧ ದಾವೆ ಮಾಡಿರುತ್ತೇನೆ. ನಾನು ಸದರಿ ದಾವೆಯನ್ನು ಆಸ್ತಿ ಕುರಿತು ಮಾಡಿರುತ್ತೇನೆ. ನಾನು ಎಂ.ಜಿ. ರಸ್ತೆಯಲ್ಲಿರುವ ಗೊಬ್ಬರದ ಅಂಗಡಿ, ಮರೋಳ ಗ್ರಾಮದಲ್ಲಿರುವ 14-15 ಎಕರೆ ಜಮೀನು ಹಾಗೂ ಮನೆಯ ಬಗ್ಗೆ ದಾವೆ ಮಾಡಿರುತ್ತೇನೆ, ಅವುಗಳ ನಂಬರ ಹೇಳಲು ಬರುವುದಿಲ್ಲ. ಅದೇ ರೀತಿ ದಾವಾಸ್ತಿಗಳ ಕ್ಷೇತ್ರ ಹೇಳಲು ಬರುವುದಿಲ್ಲ .

**2.** 1 ನೇ ಪ್ರತಿವಾದಿಯಾದ ಚನ್ನಬಸಪ್ಪ ಇವನ ಹೆಂಡತಿಯ ಹೆಸರು ವಿಜಯಾ ಅಂದರೆ ಸರಿ. ವಿಜಯಾ ಅಂದರೆ ನನ್ನ ಮಗಳು ಅಂದರೆ ಸರಿ. 1 ನೇ ಪ್ರತಿವಾದಿ ಹಾಗೂ 2 ನೇ ಪ್ರತಿವಾದಿ ಆರೋಗ್ಯವಾಗಿದ್ದಾರೆ ಅಂದರೆ ಸರಿ. ಅದೇ ರೀತಿ ಅವರು ಮಾನಸಿಕವಾಗಿ ಸಹ ಸದೃಢರಾಗಿರುತ್ತಾರೆ ಅಂದರೆ ಸರಿ. 1 ನೇ ಪ್ರತಿವಾದಿ ಖಾಯಂ ತರೀಖ ಮರೋಳ ಗ್ರಾಮದಲ್ಲಿ ವಾಸವಿರುತ್ತಾರೆ ಅಂದರೆ ಸರಿ. ಮರೋಳ

ಗ್ರಾಮದಲ್ಲಿ 1 ನೇ ಪ್ರತಿವಾದಿಯ ಗೊಬ್ಬರದ ಅಂಗಡಿ ಇದೆ ಅಂದರೆ ಸರಿ. ಸದರಿ ಅಂಗಡಿಯನ್ನು1 ನೇ ಪ್ರತಿವಾದಿಯೇ ನಡೆಸುತ್ತಾನೆ ಅಂದರೆ ಸರಿ. 1 ನೇ ವಾದಿಗೆ ಈಗ 20 ವರ್ಷ ವಯಸ್ಸು ಆಗಿರುತ್ತದೆ ಅಂದರೆ ಸರಿ. 2 ನೇ ವಾದಿಯ ವಯಸ್ಸು 18 ವರ್ಷ ಆಗಿರುತ್ತದೆ ಅಂದರೆ ಸಾಕ್ಷಿ 17 ಇರಬಹುದು ಅಂತಾ ಹೇಳುತ್ತಾರೆ. 3 ನೇ ವಾದಿಗೆ ಈಗ 13 ವರ್ಷ ಅಂದರೆ ಇರಬಹುದು. ಈಗ 1 ನೇ ವಾದಿ ಶಿಕ್ಷಣ ಪಡೆಯುತ್ತಿಲ್ಲ ಅಲ್ಲಿ ಊರಿನಲ್ಲಿಯೇ ಹೊಲ ಮಾಡುತ್ತಿದ್ದಾನೆ. 2 ನೇ ವಾದಿ ದ್ವಿತೀಯ ಪಿ.ಯು.ಸಿ., ಶಿಕ್ಷಣವನ್ನು ಹಾವೇರಿಯಲ್ಲಿ ಪಡೆಯುತ್ತಿದ್ದಾಳೆ. 3 ನೇ ವಾದಿಯು ಮರೋಳ ಗ್ರಾಮದಲ್ಲಿ 9 ನೇ ತರಗತಿ ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾನೆ ಅಂದರೆ ಸರಿ. ವಾದಿಯರು 3 ಜನ ಖಾಯಂ ತರೀಕ ಮರೋಳ ಗ್ರಾಮದಲ್ಲಿ ವಾಸವಿದ್ದಾರೆ ಅಂದರೆ ಇಲ್ಲಿಯೂ ಬರುತ್ತಾರೆ ಅಲ್ಲಿಯೂ ವಾಸವಿರುತ್ತಾರೆ ಅಂತಾ ಹೇಳುತ್ತಾರೆ. ಖಾಯಂ ತರಿ ಮರೋಳ ಗ್ರಾಮದಲ್ಲಿ ವಾಸವಿರುತ್ತಾರೆ ಅಂದರೆ ಸರಿ. 1 ರಿಂದ 3 ನೇ ವಾದಿಯರು ಹಾಗೂ 1 ಮತ್ತು 2 ನೇ ಪ್ರತಿವಾದಿ ಮರೋಳ ಗ್ರಾಮದಲ್ಲಿ ಒಂದೇ ಮನೆಯಲ್ಲಿ ವಾಸವಿರುತ್ತಾರೆ ಅಂದರೆ ಸರಿ. 3 ಜನ ವಾದಿಯರ ಆಗು-ಹೋಗುವುಗಳನ್ನು ಹಾಗೂ ಶಿಕ್ಷಣದ ಖರ್ಚನ್ನು 1 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದಾನೆ ಅಂದರೆ ಸುಳ್ಳು. 2 ನೇ ವಾದಿಯು ದಾವಣಗೆರೆಯ ಅನುಭವ ಮಂಟಪ ಕಾಲೇಜನಲ್ಲಿ ಓದುತ್ತಿದ್ದಾಳೆ. ಈ ಮೊದಲು ಹಾವೇರಿಯಲ್ಲಿ ಓದುತ್ತಿದ್ದಾಳೆ ಅಂತಾ ಹೇಳಿದ್ದು ನಿಜವಿರುವುದಿಲ್ಲ, ಈಗ ಹೇಳಿದ್ದು ನಿಜವಿರುತ್ತದೆ. 2 ನೇ ವಾದಿಯು 1 ಮತ್ತು 2 ನೇ ಪ್ರತಿವಾದಿಯರ ದೇಖಿರೆಖಿಯಲ್ಲಿ ಇರುತ್ತಾಳೆ ಅಂದರೆ ಸುಳ್ಳು. ವಾದಿಯರು ನನ್ನ ದೇಖಿರೇಖಿಯಲ್ಲಿ ಇರುತ್ತಾರೆ, 1 ಮತ್ತು 2 ನೇ ಪ್ರತಿವಾದಿಯರು ಅವರನ್ನು ನೋಡಿಕೊಳ್ಳುತ್ತಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**3.** ನನ್ನ ಊರು ಹಾವೇರಿ ತಾಲ್ಲೂಕ ದೇವಿಹೊಸೂರ ಅಂದರೆ ಸರಿ. ಅದು ಹಾವೇರಿಯಿಂದ ಪಶ್ಚಿಮ ದಿಕ್ಕಿನಲ್ಲಿ 10 ಕಿ.ಮೀ. ಅಂತರದಲ್ಲಿ ಇದೆ ಅಂದರೆ ಸರಿ. ಅದೇ ರೀತಿ ಮರೋಳ ಗ್ರಾಮ ಹಾವೇರಿಯಿಂದ ಪೂರ್ವ ದಿಕ್ಕಿಗೆ 32 ಕಿ.ಮೀ. ಅಂತರದಲ್ಲಿ ಇರುತ್ತದೆ ಅಂದರೆ ಸರಿ. ನನ್ನ ಮಗಳಾದ 2 ನೇ ಪ್ರತಿವಾದಿ ಬಿ.ಕಾಂ. ಪದವಿ ಪಡೆದಿರುತ್ತಾಳೆ ಅಂದರೆ ಸರಿ. ಅವಳಿಗೆ ಸಂಪೂರ್ಣ ತಿಳುವಳಿಕೆ ಇರುತ್ತದೆ ಅಂದರೆ ಸರಿ.

**4.** ಎಂ.ಜಿ.ರಸ್ತೆಯಲ್ಲಿರುವ ದಾವಾಸ್ತಿಯಲ್ಲಿ ಮೊದಲು ಗೊಬ್ಬರದ ಅಂಗಡಿ ಇತ್ತು ಅಂದರೆ ಸರಿ. ಮರೋಳ ಗ್ರಾಮದಲ್ಲಿರುವ ಗೊಬ್ಬರ ಅಂಗಡಿಯನ್ನು ಚನ್ನಬಸಪ್ಪ ಇಲ್ಲದ ಹೊತ್ತಿನಲ್ಲಿ ನನ್ನ ಮಗಳು ನೋಡಿಕೊಳ್ಳುತ್ತಿದ್ದಳು ಅಂದರೆ ಸುಳ್ಳು. ನಾನು ಈ ಪ್ರಕರಣ ದಾಖಲಿಸುವ ಮೊದಲು ವಾದಿಯರ ಅಲ್ಪವಯಿ ಸಂರಕ್ಷಣಾದಾರ ಅಂತಾ ನೇಮಿಸುವಂತೆ ಸಂಬಂಧಪಟ್ಟ ನ್ಯಾಯಾಲಯದಿಂದ ಆದೇಶ ಪಡೆದಿಲ್ಲ. ನನ್ನ ಹಾಗೂ 1 ಮತ್ತು 2 ನೇ ಪ್ರತಿವಾದಿಯರ ಸಂಬಂಧ ಈಗಲೂ ಚೆನ್ನಾಗಿರುತ್ತದೆ ಅಂದರೆ ಸಾಕ್ಷಿ ವ್ಯತ್ಯಾಸ ಇರುತ್ತದೆ ಅಂತಾ ಹೇಳುತ್ತಾರೆ. ಈಗಲೂ ಸಹ ನನ್ನ ಸಂಬಂಧ ಮಗಳು ಹಾಗೂ ಅಳಿಯನ ಜೊತೆ ಚೆನ್ನಾಗಿಯೇ ಇರುತ್ತದೆ, ಆದರೂ ಸಹ ಇಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅಂತಾ ಹೇಳುತ್ತಾರೆ. ಪ್ರತಿ ಕೇಸಿನ ಮುದ್ದತ್ತಿಗೆ ಆತನೇ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತಾನೆ ಅಂದರೆ ಸುಳ್ಳು. ನನಗೆ 1 ರಿಂದ 3 ನೇ ವಾದಿಯರ ಅಲ್ಪವಯಿ ಸಂರಕ್ಷಣಾದಾರ ಆಗಲು ಯಾವುದೇ ಹಕ್ಕು ಇರುವುದಿಲ್ಲ ಆದರೂ ಸಹ ಆ ರೀತಿ ಸೃಷ್ಠಿಸಿರುತ್ತೇನೆ ಅಂದರೆ ಸುಳ್ಳು. ನಾನು ದಾವೆಯಲ್ಲಿ ಬರೆಸಿರುವಂತೆ ವಾದಿಯರ ಪರವಾಗಿ ದಾವೆ ಸಲ್ಲಿಸಲು ನನಗೆ ಕಾನೂನಿನಲ್ಲಿ ಯಾವುದೇ ಅಧಿಕಾರ ಬರುವುದಿಲ್ಲ ಅಂದರೆ ಸುಳ್ಳು. ವಾದಿಯರಿಗೆ ಅವರ ತಂದೆ-

ತಾಯಿ ಅಂದರೆ 1 ಮತ್ತು 2ನೇ ಪ್ರತಿವಾದಿಯರೇ ಅಲ್ಪವಯಿ ಸಂರಕ್ಷಣಾದಾರರು ಆಗುತ್ತಾರೆ ಅಂದರೆ ಸುಳ್ಳು.

(ಮುಂದುವರೆದ ಪಾಟೀ ಸವಾಲಿಗೆ 3ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**-ಸಹಿ- 24-01-2024**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.